# ರಣಬೀರ್, ರಣ್‌ವೀರ್ ಮೋಡಿ



ಬಾಲಿವುಡ್‌ನಲ್ಲಿ ಖಾನ್‌ತ್ರಯರ ಹಿಡಿತ ಸಡಿಲಗೊಳ್ಳುತ್ತಿದೆ. ಸಲ್ಮಾನ್, ಶಾರೂಕ್ ಮತ್ತು ಆಮೀರ್ ಎಂಬ ಮೂವರು ತ್ರಿಮೂರ್ತಿಗಳು ಇತ್ತೀಚಿನ ವರ್ಷಗಳಲ್ಲಿ ಬಾಲಿವುಡ್ ಮಾರುಕಟ್ಟೆಯ ಮೇಲೆ ಹೊಂದಿದ್ದ ಹಿಡಿತಕ್ಕೆ 2018ರಲ್ಲಿ ಮೊದಲ ಬಾರಿಗೆ ಹೊಡೆತ ಬಿದ್ದಿದೆ. ರಣಬೀರ್ ಕಪೂರ್ ಮತ್ತು ರಣ್‌ವೀರ್ ಸಿಂಗ್ ಇಬ್ಬರೂ ಈ ಖಾನ್ ಸಾಮ್ರಾಜ್ಯಕ್ಕೆ ಹೊಡೆತ ನೀಡಿರುವ ತಾರೆಯರು.

ಕಳೆದ ವರ್ಷ ಖಾನ್‌ತ್ರಯರ ಚಿತ್ರಗಳ ಕಲೆಕ್ಷನ್ ನೋಡಿದರೆ ಈ ವಿಷಯ ಸ್ಪಷ್ಟವಾಗುತ್ತದೆ. ಚಿತ್ರಗಳ ಬಾಕ್ಸಾಫೀಸ್ ಕಲೆಕ್ಷನ್ ಮೂವರಿಗೂ ದುಃಸ್ವಪ್ನದಂತೆ ಕಾಡಿದೆ. ಸಲ್ಮಾನ್ ಖಾನ್ ಅಭಿನಯದ 'ರೇಸ್' 166 ಕೋಟಿ ರೂಪಾಯಿ ಗಳಿಸಿದರೆ, ಆಮೀರ್ ಖಾನ್‌ನ 'ಥಗ್ಸ್ ಆಫ್ ಹಿಂದೂಸ್ತಾನ್' ಬರೇ 151 ಕೋಟಿ ರೂಪಾಯಿ ಸಂಗ್ರಹಿಸಿತು. ಶಾರೂಕ್ ಖಾನ್‌ನ 'ಝೀರೊ' 100 ಕೋಟಿಯ ಗಡಿ ದಾಟಲು ಏದುಸಿರು ಬಿಡುತ್ತಿದೆ. ಬಕ್ರೀದ್, ದೀಪಾವಳಿ, ಕ್ರಿಸ್‌ಮಸ್, ರಾಜಾದಿನ ಮುಂತಾಗಿ ಎಲ್ಲ ಲೆಕ್ಕಾಚಾರಗಳನ್ನು ನೋಡಿಕೊಂಡೇ ಈ ಹೀರೋಗಳ ಸಿನಿಮಾಗಳು ಬಿಡುಗಡೆಯಾದರೂ ಬಾಕ್ಸಾಫೀಸ್ ಕಲೆಕ್ಷನ್ ನೆಲಕಚ್ಚಿರುವುದು ನೋಡಿದರೆ, ಖಾನ್‌ತ್ರಯರು ಹಿಂದಿನಂತೆ ಬಾಲಿವುಡ್ ಸಾಮ್ರಾಜ್ಯವನ್ನು ಇನ್ನು ಮುಂದೆ ಆಳುವುದು ಕಷ್ಟ ಎನ್ನಬಹುದು. 2018ರಲ್ಲಿ ಮೂವರು ಖಾನ್‌ಗಳಲ್ಲಿ ಯಾರೊಬ್ಬರ ಸಿನಿಮಾಗಳೂ ಅತ್ಯಧಿಕ ಗಳಿಕೆಯ ಸಿನಿಮಾ ಎನ್ನಿಸಿಕೊಳ್ಳಲಿಲ್ಲ. ಕಳೆದ 12 ವರ್ಷಗಳಿಂದ ಈ ಮೂವರಲ್ಲಿ ಒಬ್ಬರಲ್ಲ ಒಬ್ಬರ ಸಿನಿಮಾ, ವರ್ಷದ ಅತ್ಯಧಿಕ ಗಳಿಕೆಯ ಚಿತ್ರ ಎನ್ನಿಸಿಕೊಳ್ಳುತ್ತಿತ್ತು.

ಕಳೆದ ವರ್ಷ ಹಿಂದಿಯಲ್ಲಿ ಅತ್ಯಧಿಕ ಹಣ ಗಳಿಸಿದ ಚಿತ್ರ ರಣಬೀರ್ ಕಪೂರ್ ಅಭಿನಯದ 'ಸಂಜೂ' ಎನ್ನುವುದು ಕುತೂಹಲಕರ ಸಂಗತಿ. ದೀಪಿಕಾಳೇ ಮುಖ್ಯ ಪಾತ್ರಧಾರಿಣಿಯಾಗಿದ್ದ 'ಪದ್ಮಾವತ್' 302 ಕೋಟಿ ರೂಪಾಯಿ ಗಡಿ ದಾಟಿದ್ದರೆ, ರಣ್‌ವೀರ್ ಸಿಂಗ್ ಅಭಿನಯದ 'ಸಿಂಬಾ' ಈಗಾಗಲೆ 180 ಕೋಟಿ ರೂಪಾಯಿ ಗಡಿ ದಾಟಿದೆ. ಪದ್ಮಾವತ್‌ನಲ್ಲೂ ವಿಲನ್ ಪಾತ್ರಧಾರಿ ರಣ್‌ವೀರ್ ಮಿಂಚಿದ್ದ.

ರಣಬೀರ್ ಕೈತುಂಬ ಚಿತ್ರಗಳಿವೆ ಎಂದಲ್ಲ. ಈ ವರ್ಷ 'ಬ್ರಹ್ಮಾಸ್ತ್ರ' ಮಾತ್ರ ಬಿಡುಗಡೆ ಕಾಣಲಿದೆ. ಮುಂದಿನದು 'ಶಂಸೇರಾ' ಎನ್ನುವ ಚಿತ್ರ. ಈ ಆ್ಯಕ್ಷನ್ ಥ್ರಿಲ್ಲರ್ ಚಿತ್ರದಲ್ಲಿ ಸಂಜಯ್‌ದತ್ ಕೂಡಾ ಇದ್ದಾನೆ. ಆದರ ಮುಂದಿನ ವರ್ಷಕ್ಕೆ ಇನ್ನೆರಡು ಚಿತ್ರಗಳ ಭೂಮಿಕೆ ಸಿದ್ಧವಾಗಿದೆ. ಸೂಪರ್ ತಾರೆಯರಂತೆ ಈಗಲೇ ರಣಬೀರ್ ಕಪೂರ್ ವರ್ಷಕ್ಕೊಂದೇ ಸಿನಿಮಾ ಎಂಬ ಸೂತ್ರಕ್ಕೆ ಅಂಟಿದಂತಿದೆ.

ರಣ್‌ವೀರ್ ಸಿಂಗ್ ಓಟ ಇದಕ್ಕಿಂತ ಭಿನ್ನ. ಈ ವರ್ಷ ಬಿಡುಗಡೆಗೊಳ್ಳಲಿರುವ ಮೂರು ಸಿನಿಮಾಗಳು ಆತನ ಅಭಿಮಾನಿಗಳನ್ನು ತುದಿಗಾಲಲ್ಲಿ ನಿಲ್ಲಿಸಿವೆ. ವಿಭಿನ್ನ ಕಥೆಗಳಿಂದಾಗಿ 'ಗಲ್ಲಿಬಾಯ್', '83' ಮತ್ತು 'ತಖ್ತ್' ಸಿನಿಮಾಗಳು ಸಾಕಷ್ಟು ನಿರೀಕ್ಷೆ ಹುಟ್ಟಿಸಿವೆ. ಆದರಲ್ಲೂ ಕರಣ್ ಜೋಹರ್, ಕಬೀರ್ ಖಾನ್ ಮತ್ತು ಜೋಯಾ ಅಖ್ತರ್ ಈ ಚಿತ್ರಗಳನ್ನು ನಿರ್ದೇಶಿಸುತ್ತಿರುವುದು ರಣ್‌ವೀರ್‌ನ ಮಾರುಕಟ್ಟೆ ಮೌಲ್ಯವನ್ನೂ ಹೆಚ್ಚಿಸಿವೆ. 2019ರಲ್ಲೂ ಈ ಇಬ್ಬರು ನಟರೇ ಬಾಕ್ಸಾಫೀಸ್ ದಾಖಲೆಗಳಲ್ಲಿ ಮುಂಚೂಣಿಯಲ್ಲಿದ್ದರೆ ಆಶ್ಚರ್ಯವಿಲ್ಲ.

■ ಬಿಂದು